# ದಿವ್ಯನಾಮ

**ಸ್ವಾಮಿ ಅದ್ಭುತಾನಂದ**

## (ಭಕ್ತನೊಂದಿಗೆ ಪ್ರಶ್ನೋತ್ತರ)



**ಭಕ್ತ :** ಮಹಾರಾಜ್, ಸಂನ್ಯಾಸಿಗಳು ಕಾಮ-ಕಾಂಚನ ತ್ಯಾಗ ಮಾಡಬೇಕೆಂದು ಬೋಧನೆ ಮಾಡುತ್ತಾರೆ. ಆದರೆ ನಮ್ಮಂಥ ಗೃಹಸ್ಥರಿಗೆ ಅಂಥ ಆಸೆಗಳನ್ನು ತ್ಯಜಿಸುವುದು ಹೇಗೆ ಸಾಧ್ಯ ? ನಮ್ಮ ಮನಸ್ಸನ್ನು ಬಯಕೆಗಳು ದಾಳಿಯಿಟ್ಟು ಆಕ್ರಮಿಸುತ್ತವೆ. ಅಲ್ಲಿ ಅವುಗಳೊಂದಿಗೆ ಹೋರಾಡುವುದು ನಮಗೆ ಸಾಧ್ಯವೇ ಇಲ್ಲ. ಹೀಗಿರುವಾಗ ಅವುಗಳನ್ನು ತೊಲಗಿಸುವುದು ಹೇಗೆ? ನಾವು ಯಾವ ಬಗೆಯ ಅಸ್ತ್ರಗಳಿಂದ ಅವುಗಳೊಡನೆ ಕಾದಾಡಿದರೂ ಅವು ನಮ್ಮನ್ನು ಸೋಲಿಸಿಬಿಡುತ್ತವೆ, ಮನಸ್ಸನ್ನು ನಿಯಂತ್ರಿಸಲು ಬಿಡುವುದೇ ಇಲ್ಲ. ನೀವು ನಾಮಜಪ ಮಾಡಲು ಹೇಳುತ್ತಿದ್ದೀರಿ. ಆದರೆ ನಮಗೆ ಅದನ್ನು ಮಾಡಲು ಉತ್ಸಾಹ ಉಂಟಾಗುತ್ತಿಲ್ಲ – ಆಸೆಗಳು ಮನಸ್ಸನ್ನು ಎಳೆದುಬಿಡುತ್ತವೆ. ನೀವು ವಿಚಾರ ಮಾಡಬೇಕು ಎನ್ನುತ್ತೀರಿ. ಇಲ್ಲೂ ನಮ್ಮ ಸಂಸ್ಕಾರಗಳು ಬಲವಂತವಾಗಿ ನಮ್ಮ ಮನಸ್ಸನ್ನು ಸೆಳೆದು, ನಮ್ಮ ಬುದ್ಧಿಯನ್ನು ಕವಿದುಬಿಡುತ್ತವೆ. ಈ ಆಸೆ, ಬಯಕೆಗಳ ನಡುವೆ ನಾಮಜಪ ಮಾಡಲು ನಮ್ಮಲ್ಲಿ ಸ್ಫೂರ್ತಿಯನ್ನು ಉಂಟುಮಾಡುವುದು ಹೇಗೆ? ದಯವಿಟ್ಟು ನಮಗೆ ತಿಳಿಸಿಕೊಡಿ.

**ಸ್ವಾಮಿ ಅದ್ಭುತಾನಂದ :** ನೀವು ಅದೇ ಕೊನೆಯಿಲ್ಲದ ಸಂದೇಹವನ್ನೇ ಕೇಳುತ್ತಿದ್ದೀರಿ. 'ನಾಮಜಪ ಮಾಡುವುದು ಹೇಗೆ?' ಎಂದು. ಇದನ್ನು ತಿಳಿಯಿರಿ – ಭಗವನ್ನಾಮದ ಪುನರುಚ್ಚಾರದಿಂದ ಆ ನಾಮವು ನಮ್ಮ ಮನಸ್ಸಿನಲ್ಲಿ ಬೀಜ ಬಿತ್ತಿದಂತಾಗುವುದು. ಹಲವು ಬಗೆಯ ಆಸೆಗಳಿಂದ ಮನಸ್ಸು ಹುಚ್ಚುಹುಚ್ಚಾಗಿ ಎಲ್ಲೆಂದರಲ್ಲಿ ಸುತ್ತಾಡುತ್ತಿರುವುದು. ವಾಸನೆಗಳು ಅವುಗಳಿಗೆ ಮೂಗುದಾರ ಹಾಕಿ ಎಳೆದೊಯ್ಯುತ್ತಿವೆ. ಅವುಗಳಿಗಿಂತ ಹೆಚ್ಚಿನ ಅಪರಾಧಿ ಇನ್ನು ಯಾವುದು?

ಅರ್ಜುನನು ಶ್ರೀಕೃಷ್ಣನಿಗೆ ಕೇಳಿದ ಸಂದೇಹ ಇದೇ. ಮನಸ್ಸು ಚಂಚಲ, ಸಹಜವಾಗಿ ಅದು ದುಷ್ಟವಾದುದು ಎಂದು ಶ್ರೀಕೃಷ್ಣ ಒಪ್ಪಿಕೊಂಡ, ಆದರೆ ಅವನು ಮುಂದುವರಿಸಿದ, '' ಎಲೈ ಅರ್ಜುನ! ಅಭ್ಯಾಸ, ವೈರಾಗ್ಯಗಳನ್ನು ರೂಢಿಸಿಕೊಳ್ಳುವ ಮೂಲಕ ಮನಸ್ಸನ್ನು ಕ್ರಮೇಣ ನಿಗ್ರಹಕ್ಕೆ ಒಳಪಡಿಸಬಹುದು.'' ಮನಸ್ಸು ಎಷ್ಟೆಷ್ಟು ಬಾರಿ ಪ್ರಾಪಂಚಿಕ ವಸ್ತುಗಳ ಕಡೆಗೆ ಧಾವಿಸಿ ಹೋಗುವುದೋ ಅಷ್ಟಷ್ಟು ಸಲವೂ ನೀನು ವಿಚಾರ ಮಾಡಬೇಕು. ಪ್ರಪಂಚದ ವಸ್ತುಗಳೆಲ್ಲವೂ ನಶ್ವರ. ಇಂದು ಅಸ್ತಿತ್ವದಲ್ಲಿವೆ, ನಾಳೆ ಮಾಯವಾಗುತ್ತವೆ. ಅಂಥ ನಶ್ವರ ವಸ್ತುಗಳು ನಿನಗೆ ಏನೇನು ಲಭಿಸಿವೆಯೋ ಅವುಗಳಲ್ಲೇ ನೀನು ತೃಪ್ತನಾಗು. ನಿನಗೆ ಅಧಿಕ ವಸ್ತುಗಳು ಏಕೆ ಬೇಕು? ಇದ್ದು ಮಾಯವಾಗುವ ವಸ್ತುಗಳ ಭಾರದಿಂದ ನೀನು ಕುಗ್ಗಿಹೋದರೆ ನಿನಗೆ ಶಾಶ್ವತ ವಸ್ತುವನ್ನು ಪಡೆಯಲು ಸ್ಥಳವೇ ಇರಲಾರದು. ನಶ್ವರ ವಸ್ತುಗಳನ್ನು ಕೂಡಿಹಾಕುವುದರಿಂದ ನೀನು ಶಾಶ್ವತವಾದುದನ್ನು ಸೃಷ್ಟಿ ಮಾಡಲಾರೆ. ಶಾಶ್ವತ ವಸ್ತು ಒಂದೇ; ಅದೇ ಬ್ರಹ್ಮ. ಬ್ರಹ್ಮವೊಂದನ್ನು ಬಿಟ್ಟು ಉಳಿದೆಲ್ಲವೂ ಅಸತ್ಯವೆಂದು ತಿಳಿ. ಈ ರೀತಿ ನಿನ್ನ ಮನಸ್ಸಿಗೆ ತಿಳಿವಳಿಕೆ ನೀಡು. ಹೀಗೆ ಮತ್ತೆ ಮತ್ತೆ ಪ್ರಯತ್ನಿಸುವುದರಿಂದ ನಿನ್ನಲ್ಲಿ ವಿವೇಕ ಜಾಗ್ರತವಾಗುವುದನ್ನು ನೀನೇ ನೋಡುವೆ.



ಶ್ರೀರಾಮಚಂದ್ರನು ತನ್ನ ಆಸ್ಥಾನದಲ್ಲಿ ಹನುಮಂತನಿಗೆ ಮುತ್ತಿನ ಹಾರವನ್ನು ಉಡುಗೊರೆಯಾಗಿ ನೀಡಿದ ಕಥೆ ನಿನಗೆ ಗೊತ್ತೆ ? ಹನುಮಂತ ಮುತ್ತಿನ ಮಣಿಗಳನ್ನು ತಿರುಗಿಸಿ ಪರೀಕ್ಷಿಸಿ ನೋಡಿದ. ಒಂದನ್ನು ಹಲ್ಲಿನಿಂದ ಕಡಿದು ಕೂಡ ನೋಡಿದ. ಅದರಲ್ಲಿ ರಾಮನಾಮವಿಲ್ಲದ್ದನ್ನು ಕಂಡು ತಕ್ಷಣವೇ ಅದನ್ನು ಎಸೆದುಬಿಟ್ಟ. ಇದನ್ನು ನೋಡಿ ಕೋಪಗೊಂಡ ಲಕ್ಷ್ಮಣ, ''ಕೊನೆಗೂ ಇವನೊಬ್ಬ ಮಂಗನೇ; ಮುತ್ತಿನ ಶ್ರೇಷ್ಠತೆ ಇವನಿಗೇನು ಗೊತ್ತಿದೆ? ಇಷ್ಟೊಂದು ಉತ್ತಮವಾದ ಮುತ್ತಿನ ಹಾರವನ್ನು ಆತ ತನ್ನ ಹಲ್ಲಿನಿಂದ ಕಡಿದು ಅಪವಿತ್ರಗೊಳಿಸಿಬಿಟ್ಟ'' ಎಂದ.

ಲಕ್ಷ್ಮಣ ಕೋಪಿಸಿಕೊಂಡದ್ದನ್ನು ನೋಡಿ ರಾಮ ಅವನಿಗೆ ಹೇಳಿದ, '' 'ನೀನು ಹೀಗೇಕೆ ಮಾಡಿದೆ' ಎಂದು ಅವನನ್ನೇ ಏಕೆ ನೀನು ಕೇಳಬಾರದು?''

ಲಕ್ಷ್ಮಣ ಹನುಮಂತನನ್ನು ಕೇಳಿದ. ಅದಕ್ಕೆ ಅವನು ಹೀಗೆ ಉತ್ತರಿಸಿದ: ''ಅದರಲ್ಲಿ ರಾಮನಾಮ ಇತ್ತೇ ಇಲ್ಲವೇ ಎಂದು ನಾನು ಪರೀಕ್ಷಿಸಿ ನೋಡುತ್ತಿದ್ದೆ.''

ನಾವು ವಸ್ತುಗಳನ್ನು ಪರೀಕ್ಷಿಸಿ ನೋಡಬೇಕಾದುದು ಹೀಗೆ. ನಮ್ಮಲ್ಲಿ ವಿವೇಕಬುದ್ಧಿಯನ್ನು ಜ್ವಲಂತವಾಗಿರಿಸುವುದು ಅತ್ಯಂತ ಕಠಿಣವಾದ ತಪಸ್ಸು. ವಿವೇಚಿಸಿ ನೋಡಬಲ್ಲವನು ಯಾವಾಗಲೂ ತನ್ನ ಸಂಸ್ಕಾರಗಳೊಂದಿಗೆ ಹೋರಾಟ ನಡೆಸುತ್ತಿರುತ್ತಾನೆ. ತ್ಯಾಗ, ವೈರಾಗ್ಯ ಭಾವಗಳನ್ನು ಬೆಳೆಸಿಕೋ; ಆಗ ಮಾತ್ರ ನೀನು ನಿನ್ನಲ್ಲಿರುವ ಆಸೆಗಳೊಂದಿಗೆ ಹೋರಾಡಬಲ್ಲೆ. ಯಾವುದು ಸತ್ಯ , ಯಾವುದು ಅಸತ್ಯ ಎಂಬುದನ್ನು ಪ್ರತ್ಯೇಕಿಸಿ ತಿಳಿಯುವ ವಿವೇಕಬುದ್ಧಿ ನಿನ್ನಲ್ಲಿ ಜಾಗೃತವಾಗದೆ ನೀನು ಹೇಗೆ ಆಸೆಗಳನ್ನು ನಿಗ್ರಹಿಸಬಲ್ಲೆ?

ಮೊದಲಿಗೆ ನೀನು ಮನಸ್ಸೆಂಬ ಮನೆಯನ್ನು ಹೊರಗಿನ ಕಿಟಿಕಿಗಳ ಮೂಲಕ ಪ್ರವೇಶಿಸುವ ಕೊಳೆಯನ್ನೆಲ್ಲಾ ಶುದ್ಧೀಕರಿಸು. ವಿವೇಚನೆ ಮಾಡು, ಅನಂತರ '**ಪ್ರವೇಶವಿಲ್ಲ**' ಎಂಬ ಸೂಚನೆಯನ್ನು ಕಿಟಿಕಿಯ (ಅಂದರೆ ಇಂದ್ರಿಯಗಳ) ಮುಂದೆ ಅಂಟಿಸು. ಒಳಗೆ ಪ್ರವೇಶಿಸುವ ಕೊಳೆಯನ್ನೆಲ್ಲಾ ಪೋಲೀಸರಿಗೆ (ವಿವೇಕಕ್ಕೆ) ಒಪ್ಪಿಸು. ವಿವೇಕದ ಸಹಾಯದಿಂದ ಮನಸ್ಸು ಮನಸ್ಸಿನೊಂದಿಗೆ ಹೋರಾಡುವುದು. ಹೀಗೆ ಮನಸ್ಸಿನ ಒಳಗಿರುವ ಕ್ಷೇತ್ರವು ತೆರವಾಗುವುದು. ಆಗ ಅಲ್ಲಿ ಭಗವಂತನನ್ನು ಪ್ರತಿಷ್ಠಾಪಿಸಬಹುದು. ಅಲ್ಲಿ ದೇವರನ್ನು ಪ್ರತಿಷ್ಠಾಪಿಸುವ ವರೆಗೂ ನಿನಗೆ ಆಸೆಗಳನ್ನು ಗೆಲ್ಲಲಾಗುವುದಿಲ್ಲ.

ಎಲ್ಲ ಆಸೆಗಳ ಬೀಜ ಮನಸ್ಸಿನಲ್ಲೇ ಇದೆ ಎಂಬುದನ್ನು ನಿಸ್ಸಂದೇಹವಾಗಿಯೂ ತಿಳಿ. ಒಳಗಿರುವ ಇಂದ್ರಿಯಗಳು ಹಾಗೂ ಹೊರ ಗಿರುವ ವಿಷಯ-ವಸ್ತುಗಳು ಆ ಬೀಜಕ್ಕೆ ನೀರನ್ನೆರೆಯುವುವು. ಹೀಗೆ ನೀರೆರೆಯುವುದರಿಂದಲೇ ವಿಲಾಸದ ಬೆಳೆ ಹುಲುಸಾಗಿ ಬೆಳೆಯುವುದು. ಈ ಬೆಳೆಯನ್ನು ಕತ್ತರಿಸಿ, ಬೀಜವನ್ನು ನಾಶಮಾಡಬೇಕು. ಅದಾದ ಮೇಲೆ ಭಗವನ್ನಾಮವನ್ನು ಅಲ್ಲಿ ಬಿತ್ತಬೇಕು. ಆಗ ಮಾತ್ರವೇ ಅಲ್ಲಿ ದಿವ್ಯನಾಮದ ಬೆಳೆ ಹುಲುಸಾಗಿ ಬೆಳೆಯುವುದು. ಆದರೆ ಈಗ ಅಲ್ಲಿ ಆಸೆಗಳ ಬೆಳೆ ತುಂಬಿಕೊಂಡಿದೆ. ಶ್ರೀರಾಮಕೃಷ್ಣರು ಹೇಳುತ್ತಿದ್ದರು : ''ಎಲ್ಲಿ ಕಾಮವಿರುವುದೋ ಅಲ್ಲಿ ರಾಮನಿಲ್ಲ; ಎಲ್ಲಿ ರಾಮನಿರುವನೋ ಅಲ್ಲಿ ಕಾಮವಿಲ್ಲ.''

**ಭಕ್ತ :** ಮಹಾರಾಜ್, ನನಗೆ ಇನ್ನೂ ಸ್ವಲ್ಪ ಸಂದೇಹವಿದೆ. ಇಂದ್ರಿಯಗಳನ್ನು ಮೊದಲು ನಿಗ್ರಹಿಸಿದ ನಂತರ ಭಗವಂತನ ನಾಮಜಪ ವನ್ನು ಮಾಡಬೇಕೆಂದು ನಮಗೆ ಸಲಹೆ ನೀಡುತ್ತಿದ್ದೀರಾ?

**ಸ್ವಾಮೀಜಿ :** ಹಾಗೂ ಮಾಡಬಹುದು. ಆದರೆ ಭಗವಂತನ ನಾಮಕ್ಕೆ ಅದೆಂತಹ ಶಕ್ತಿಯಿದೆ ಎಂದರೆ, ಅದು ಆಸೆಗಳ ಬೀಜವನ್ನು ಸುಟ್ಟು ಬಿಡಬಲ್ಲುದು. ಶ್ರೀರಾಮಕೃಷ್ಣರು, 'ನಾಮಜಪವೆಂಬ ಗುರಾಣಿಯಿಂದ ಕಾಮದ ಆಕ್ರಮಣವನ್ನು ಹಿಮ್ಮೆಟ್ಟಿಸು' ಎಂದು ಹೇಳುತ್ತಿದ್ದರು.

**ಭಕ್ತ :** ಮಹಾರಾಜ್, ನಾಮವು ಹೇಗೆ ಕಾಮವನ್ನು ಸದೆಬಡಿಯಬಲ್ಲುದು?

**ಸ್ವಾಮೀಜಿ :** ಕಾಮವು ನಾಮದ ಸಮೀಪಕ್ಕೆ ಬರಲಾರದು. ದಿವ್ಯನಾಮಕ್ಕೆ ಅದೆಂತಹ ಆಕರ್ಷಣೆಯಿದೆ ಎಂದರೆ, ಒಂದು ಸಲ ಮನಸ್ಸು ಅದಕ್ಕೆ ವಶವಾಗಿಬಿಟ್ಟರೆ ಕಾಮಕ್ಕೆ ತಲೆಯೆತ್ತಲು ಅವಕಾಶವೇ ಸಿಗಲಾರದು. ಏಕೆಂದರೆ, ನಾಮವೆಂಬುದು ಸತ್ಯ. ಯಾವ ಮನಸ್ಸು ಸತ್ಯದ ಮೇಲೆ ಧ್ಯಾನ ಮಾಡುವುದೋ, ಅದನ್ನು ಮಿಥ್ಯೆ ಎಂದಿಗೂ ವಶಪಡಿಸಲಾರದು.

**ಭಕ್ತ :** ಎಚ್ಚರದ ಅವಸ್ಥೆಯಲ್ಲಿ ಇದು ಹೀಗಿರಬಹುದು. ಆದರೆ ಆಸೆಗಳು ನಿದ್ದೆಯಲ್ಲಿ ಕೂಡ ವ್ಯಕ್ತಿಯ ಬೆನ್ನುಹತ್ತಿ ಆಕ್ರಮಿಸುತ್ತವೆ. ಅಂಥ ಆಕ್ರಮಣದಿಂದ ಅವನು ತನ್ನನ್ನು ಹೇಗೆ ರಕ್ಷಿಸಿಕೊಳ್ಳಬೇಕು? ನಿದ್ದೆ ಹಾಗೂ ಕನಸಿನಲ್ಲಿ ಮನಸ್ಸು ಅಂಥ ಆಕ್ರಮಣದಿಂದ ಹೇಗೆ ತನ್ನನ್ನು ಕಾಪಾಡಿಕೊಳ್ಳಬೇಕು?

**ಸ್ವಾಮೀಜಿ :** ಭಗವಂತನ ನಾಮವು ಅಂಥ ಆಕ್ರಮಣದಿಂದಲೂ ಮನ್ನನ್ನು ರಕ್ಷಿಸುವುದು. ನಿಜವಾಗಿಯೂ ನಾನು ಹೇಳುತ್ತೇನೆ: ನೀನು ಸರಿಯಾಗಿ ನಾಮಜಪ ಮಾಡಿದರೆ ಅದು ನಿದ್ದೆಯ ಸಮಯದಲ್ಲೂ ಕೆಲಸ ಮಾಡುತ್ತಿರುವುದು. ನಾಮಜಪವನ್ನು ಮಾಡುವುದು ಹೇಗೆ ಎಂದು ತಿಳಿದಿರುವವನು ನಿದ್ದೆಯಲ್ಲೂ, ಎಚ್ಚರದಲ್ಲೂ ಜಪ ಮಾಡುತ್ತಾ ಹೋಗುತ್ತಾನೆ. ಉಸಿರಾಟವೇ ಮುಂತಾದ ದೈಹಿಕ ಕ್ರಿಯೆ ಗಳು ಕನಸಿನಲ್ಲಿಯೂ ನಿರಂತರ ನಡೆಯುತ್ತಿರುವಂತೆ, ನಾಮಜಪ ಕೂಡ ಮನಸ್ಸಿನಲ್ಲಿ ನಿರಂತರ ಆಗುತ್ತಿರುವುದು. ಅದು ಸಾಧಕನ ಮನಸ್ಸಿನಲ್ಲಿ ಕನಸು ಏಳುವುದಕ್ಕೆ ಬಿಡಲಾರದು. ಒಂದು ವೇಳೆ ಎದ್ದರೂ, ಅಷ್ಟರಲ್ಲೇ ಅವನನ್ನು ನಿದ್ದೆಯಿಂದ ಎಬ್ಬಿಸುವುದು. ಹೀಗೆ ಭಗವನ್ನಾಮವು ಸಾಧಕನನ್ನು ಹಗಲೂರಾತ್ರಿ ಕಾಪಾಡುವುದು.

*('ವೇದಾಂತ' ಆಂಗ್ಲ ದ್ವೈಮಾಸಿಕದಿಂದ)*